8 ಮಾನ್ಯ ರಾಜ್ಯಪಾಲರಿಂದ ಬಂದ ಸಂದೇಶ

ವಿಷಯ ಕರ್ನಾಟಕ ಭೂಕಂದಾಯ (ತಿದ್ದುಪಡಿ) ವಿಧೇಯಕ 2005

ಛೇರ್ಮನ್ MESSAGE UNDER ARTICLE 200 OF THE CONSTITUTION OF INDIA TO THE KARNATAKA LEGISLATIVE ASSEMBLY AND THE KARNATAKA LEGISLATIVE COUNCIL IN RESPECT OF THE KARNATAKA LAND REVENUE (SECOND AMENDMENT BILL 2005 (BILL, FOR SHORT) WHICH AFTER ITS PASSAGE IN BOTH THE HOUSES HAS BEEN SUBMITTED FOR OBTAINING ASSENT (LA BILL NO 31 OF 2005)

The Karnataka Land Revenue (Second Amendment) Bill 2005 (LA Bill No 31 of 2005) (Bill, for short) Passed by both the Houses of the Legislature seeks to amend the Karnataka Land Revenue Act 1964 The Amendment proposed seeks to introduce a new section numbered 69A under the heading -"Disposal of lands or other property belonging to the State Government by public auction ' The Bill contemplates granting sweeping powers to the State Government or the authorized Officer to dispose of valuable land or other property belonging to the State Government under Section 67 or otherwise by public auction the provision also provides an explanation to the words 'Valuable Land' defining it to be those lands which if auctioned shall fetch values far above the normal price

ಶ್ರೀ ವಾಟಾಳ್ ನಾಗರಾಜ್ ಕನ್ನಡದಲ್ಲಾದರೂ ಹೇಳಿ ಇಲ್ಲಿ ಕನ್ನಡವನ್ನೂ ಕೊಂದುಬಿಟ್ಟಿರಿ

ಛೇರ್ಮನ್ ಇದು ಅಲ್ಲಿಂದ ಇಂಗ್ಲೀಷಿನಿಂದಲೇ ಬಂದಿರುವುದರಿಂದ ಇಂಗ್ಲೀಷಿನಲ್ಲಿಯೇ ಓದುತ್ತಿದ್ದೇನೆ

ಶ್ರೀ ವಾಟಾಳ್ ನಾಗರಾಜ್ ಇದು ಅಗೌರವ ಇಂಥ ಅಗೌರವ ಎಲ್ಲಿಯೂ ಇಲ್ಲ ಅದನ್ನು ತರ್ಜುಮೆ ಮಾಡಿಯಾದರೂ ಓದಿ ಇದು ಸರಿಯಾದ ಕ್ರಮವಲ್ಲ ಸ್ವಾಮಿ, ತಮಗೆ ಕಿವಿ ಕೇಳಿಸುತ್ತಿದೆಯೋ ಇಲ್ಲವೋ ಗೊತ್ತಾಗುತ್ತಿಲ್ಲ ಕಿವಿಯಿಲ್ಲ, ಕಣ್ಣಿಲ್ಲ, ಆ ಪೀಠ ಕುರುಡಾಗಿ ಹೋಗಿದೆ! ನಿಮ್ಮ ಆ ಪೀಠ ಕುರುಡಾಗಿದೆ, ಕಿವುಡಾಗಿದೆ, ಆ ಪೀಠಕ್ಕೆ ದೃಷ್ಟಿ ಹೋಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಿಮಗೆ ಓದುವುದಕ್ಕೆ ಕಷ್ಟವಾಗುತ್ತದೆ ಕನ್ನಡಕ್ಕೆ ತರ್ಜುಮೆ ಮಾಡಿಯಾದರೂ ಓದಬಹುದಲ್ಲವೇ?

ಛೇರ್ಮನ್ The proposed provisions do not exclude Historical Relics and Heritage Buildings not only invariably fetch values above the market price, but have to be protected and preserved for posterity as our national heritage Since the Bill does not discriminate and distinguish the Heritage properties and Historical relics that are to be protected and preserved ffor posterity and the law in its present form provides for possibility of unrestrained disposal of such properties, it is absolutely essential to take out such Historical relics and Heritage Buildings from the purview of the provisions of the Amendment Act so that they be protected and preserved for posterity Therefore, it is absolutely necessary to include a proviso below the proposed Section 69A to the effect that the main provision do not apply to historical or heritage building which represent the History and culture of the people of the area and of the state as the case may be

The two Houses of the State Legislature need to reconsider the Bill now in the light of the observation made above The Bill is hence returned to the Karnataka Legislative Assembly and the Karnataka Legislative Council accordingly for reconsideration "

ಛೇರ್ಮನ್ ಮಾನ್ಯ Parliamentary Affairs Minister ರವರೆ, ಹೇಳಿ

9 ಚುಕ್ಕೆ ಗುರುತಿನ ಪ್ರಶ್ನೆ ಹಾಗೂ ಉತ್ತರಗಳು ಹಾಗೂ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳು

ಶ್ರೀ ಎಂ ಪಿ ಪ್ರಕಾಶ್(ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ದಿನಾಂಕ 14 2 2007 ರಂದು 12ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 14 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 71 ಪ್ರಶ್ನೆಗಳ ಪೈಕಿ 66 ಉತ್ತರಗಳನ್ನು

ಮತ್ತು

ದಿನಾಂಕ 15 2 2007 ರಂದು 13ನೇ ಪಟ್ಟಿಯ ಸದನದಲ್ಲಿ ಉತ್ತರಿಸುವ 15 ಪ್ರಶ್ನೆಗಳ ಪೈಕಿ 12 ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 23 ಪ್ರಶ್ನೆಗಳ ಪೈಕಿ 21 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಛೇರ್ಮನ್ ಮಂಡಿಸಲಾಯಿತು

(ಸದನದಲ್ಲಿ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಹಾಗೂ ಉತ್ತರಗಳು)

ಅನುಬಂಧ–1

10 ಶಾಸನ ರಚನೆ

ಛೇರ್ಮನ್ – ವಿಧೇಯಕಗಳನ್ನು ಮಂಡಿಸುವುದು

1 ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕ 2007

ಶ್ರೀ ಬಸವರಾಜ ಎಸ್ ಹೊರಟ್ಟಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ

ಛೇರ್ಮನ್. ಪ್ರಸ್ತಾವ ಏನೆಂದರೆ, "2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ)ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಬಸವರಾಜ ಎಸ್. ಹೊರಟ್ಟಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) 2007ನೇ ಸಾಲಿನ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಛೇರ್ಮನ್.– ವಿಧೇಯಕವನ್ನು ಮಂಡಿಸಲಾಗಿದೆ

(ಗೊಂದಲ)

ಶ್ರೀ ಜೆ ಸಿ ಮಾಧುಸ್ವಾಮಿ: ಮಾನ್ಯ ಛೇರ್ಮನ್‌ರವರೆ, We have objected for introduction itself

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದು ಸರಿಯಾದ ಕ್ರಮವಲ್ಲ ಆ ಬಿಲ್ introduce ಮಾಡುವುದಕ್ಕೇ ನಮ್ಮ objection ಇದೆ

(ಗೊಂದಲ)